**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ**
**ತಿಪಟೂರು**

**ಸಿ.ಸಿ ನಂ. 763/2023**

ಚಾಸಾಃ 2
ಫ್ರಾಸಾಃ 2

**ದಿನಾಂಕಃ 17-01-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | ಸಂತೋಷ್ |
| ತಂದೆಯ/ಗಂಡನ ಹೆಸರು | : | ರಾಜಣ್ಣ ಕೆ.ಎಸ್ |
| ವಯಸ್ಸು | : | 28 ವರ್ಷ |
| ಉದ್ಯೋಗ | : | ನೇಕಾರರು |
| ವಾಸ ಸ್ಥಳ | : | ಕೋಟೆ ನಾಯಕನಹಳ್ಳಿ |

**ಮುಖ್ಯ ವಿಚಾರಣೆ ಎಪಿಪಿಯವರಿಂದಃ**

ಆರೋಪಿ ಮತ್ತು ಚಾಸಾ-1 ರವರು ನನಗೆ ಗೊತ್ತು ಅವರು ನಮ್ಮ ಊರಿನವರು. ಈಗಾಗಲೇ ಗುರುತಿಸಿರುವ ನಿಪಿ-1 ರಿಂದ 3 ರಲ್ಲಿ ಸಾಕ್ಷಿಯ ಸಹಿ ಇರುವುದನ್ನು ನೋಡಿ ಗುರುತಿಸಿರುವುದರಿಂದ ನಿಪಿ-1(ಬಿ), 2(ಬಿ),3(ಬಿ) ಎಂದು ಗುರುತಿಸಲಾಯಿತು. ಅದೇ ರೀತಿ ಇನ್ನೊಂದು ಚೀಟಿಯಲ್ಲಿ ಪೊಲೀಸರು ಬರೆದು ನನ್ನ ಸಹಿಯನ್ನು ಪಡೆದಿರುತ್ತಾರೆ ಸದರಿ ಚೀಟಿಯನ್ನು ಬಿಳಿ ಚೀಲದ ಮೇಲೆ ಅಂಟಿಸಿರುವುದರಿಂದ ಈಗಾಗಲೇ ಗುರುತಿಸಿರುವ ನಿಪಿ-4 ರಲ್ಲಿ ಸಾಕ್ಷಿಯ ಸಹಿ ಇರುವುದನ್ನು ನೋಡಿ ಗುರುತಿಸಿರುವುದರಿಂದ ನಿಪಿ-4(ಬಿ) ಎಂದು ಗುರುತಿಸಲಾಯಿತು. ನಿಪಿ-1 ರಿಂದ 4 ರಲ್ಲಿ ಇರುವ ಅಂಶಗಳು ನನಗೆ ಗೊತ್ತಿಲ್ಲ. ಪೊಲೀಸರು ಸದರಿ ಸಹಿಗಳನ್ನು ನಾನು ಬಸ್ ನಿಲ್ದಾಣದಲ್ಲಿ ಇರುವಾಗ ಸಹಿಯನ್ನು ಪಡೆದಿರುತ್ತಾರೆ. ನನ್ನ ಮುಂದೆ ಯಾವುದೇ ಮದ್ಯ ತುಂಬಿದ ಟೆಟ್ರಾ ಪ್ಯಾಕೆಟ್ಸಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ನಾನು ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ, ಮೇಲೆ ಹೇಳಿರುವ ಸಹಿಗಳನ್ನು ನಾನು ಯಾವಾಗ ಮಾಡಿರುತ್ತೇನೆ ಎಂದು ನನಗೆ ನೆನಪಿಲ್ಲ.

(ಈ ಹಂತದಲ್ಲಿ ಮಾನ್ಯ ಸಸಅ ರವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯನುಡಿದಿರುವ ಕಾರಣ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

ಪಾಟೀ ಸವಾಲು ಸರ್ಕಾರಿ ಅಭಿಯೋಜಕರವರಿಂದಃ

ದಿಃ **10.11.2022** ರಂದು ನಾನು ಕೋಟೆನಾಯಕನಹಳ್ಳಿ ಗ್ರಾಮದ ಬಳಿ ನಿಂತಿರುವಾಗ ನಾನು ಮತ್ತು ಚಾಸಾ **-2** ರವರಾದ ಕೌಶಿಕ್ ರವರು ನಿಂತಿರುವಾಗ ಅಬಕಾರಿ ಉಪನಿರೀಕ್ಷಕರು, ತಿಪಟೂರು ಉಪವಿಭಾಗದಿಂದ ಬಂದಿದೀನಿ ಎಂದು ಅವರು ಪರಿಚಯ ಮಾಡಿಕೊಂಡು ತಿಪಟೂರು ಟೌನ್ ಬಿ ಹೆಚ್ ರಸ್ತೆಯಲ್ಲಿ ಗಸ್ತು ಮಾಡುತ್ತಿರುವಾಗ ದೂರವಾಣಿ ಮೂಲಕ ಕೋಟನಾಯಕನಹಳ್ಳಿ ಗ್ರಾಮದ ಒಬ್ಬರು ಕರೆ ಮಾಡಿ ದೂರು ನೀಡುತ್ತಾರೆ ಎಂದು ಕೋಟನಾಯಕನಹಳ್ಳಿ ಗ್ರಾಮದ ವಾಸಿಯಾದ ಶಿವಶಂಕರ್ ಬಿನ್ ಲೇಟ್ ಶಂಕ್ರಪ್ಪ ಎಂಬುವರು ಅವರ ವಾಸದ ಮನೆಯಲ್ಲಿ ಅಕ್ರಮವಾಗಿ ಮದ್ಯವನ್ನು ಮಾರಾಟಕ್ಕೋಸ್ಕರ ಸಂಗ್ರಹಿಸಿ ಇಟ್ಟಿದ್ದಾರೆ ಎಂದು ಬಂದ ಮಾಹಿತಿ ಮೇರೆಗೆ ನಮ್ಮ ಸದರಿ ಮನೆಯಲ್ಲಿ ಶೋಧನೆ ಮಾಡಿ ನಮ್ಮ ಸಮಕ್ಷಮದಲ್ಲಿ ಶೋಧನೆ ಮಾಡಿರುತ್ತಾರೆ ಅಲ್ಲಿ ವಿವಿಧ ಬ್ರಾಂಡಿನ ಮದ್ಯದ ಟೆಟ್ರಾ ಪ್ಯಾಕೆಟ್ಟಳನ್ನು ತುಂಬಿಟ್ಟಿರುವುದು ಕಂಡುಬಂದಿದ್ದು ನಂತರ ಆ ಚೀಲವನ್ನು ನೆಲಕ್ಕೆ ಸುರಿದು ಎಣಿಕೆ ಮಾಡಿ ನೋಡಲಾಗಿ ತಲಾ **90** ಮಿಲಿಯ **7** ರಾಜ ವಿಸ್ಕಿ ಟೆಟ್ರಾ ಪ್ಯಾಕೆಟ್ಸಗಳು ಒಟ್ಟು **01.630** ಲೀಟರ್ ಮದ್ಯ ತಲಾ **90** ಮಿಲಿಯ **25** ಐವಾಡ್ಸ ವಿಸ್ಕಿ ಟೆಟ್ರಾ ಪ್ಯಾಕೆಟ್ಸಗಳು ಒಟ್ಟು **2.250** ಲೀಟರ್, ತಲಾ **90** ಮಿಲಿಯ ಮದ್ಯ ತುಂಬಿರುವ **30** ವರಿಜಿನಲ್ ಚಾಯ್ಸ ವಿಸ್ಕಿ ಒಟ್ಟು **2.700** ಲೀಟರ್ ಮದ್ಯ , ತಲಾ **180** ಮಿಲಿಯ ಮದ್ಯ ತುಂಬಿದ **8** ಪಿ ಎನ್ **8** ಮದ್ಯದ ಟೆಟ್ರಾ ಪ್ಯಾಕೆಟ್ ಗಳಲ್ಲಿ **1.440** ಲೀಟರ್, ತಲಾ **180** ಮಿಲಿಯ ಮದ್ಯ ತುಂಬಿದ **5** ವಿಪಿ ವಿಸ್ಕಿ ಟೆಟ್ರಾ ಪ್ಯಾಕ್ಸೆಟ್ ಗಳು ಬಿ ಪಿ ವಿಸ್ಕಿ ಟೆಟ್ರಾ ಪ್ಯಾಕೆಟ್ ಗಳನ್ನು **0.900** ಲೀಟರ್ ತಲಾ **180** ಮಿಲಿಯ ಮದ್ಯ ತುಂಬಿದ **6** ಒ ಎ ಬಿ ಬ್ಯಾಂಡಿ ಟೆಟ್ರಾ ಪ್ಯಾಕೆಟ್ಗಳಲ್ಲಿ **1.080** ಲೀಟರ್ ತಲಾ **180** ಮಿಲಿಯ ಮದ್ಯ ತುಂಬಿದ **2** ಐ ಬಿ ವಿಸ್ಕಿ ಬಾಟಲ್ ಗಳು, **0.360** ಲೀಟರ್ ಒಟ್ಟು ಆರೋಪಯ ಮನೆಯಲ್ಲಿ **10.440** ಲೀಟರ್ ಮದ್ಯ ಇರುವುದನ್ನು ಕಂಡು ಬಂದಿತ್ತು ಅದನ್ನು ನಮ್ಮ ಸಮಕ್ಷಮದಲ್ಲಿ ಅಮಾನತು ಪಡಿಸಿಕೊಂಡಿದ್ದಾರೆ ಮತ್ತು ಸದರಿ ಮದ್ಯದ ಟೆಟ್ರಾ ಪ್ಯಾಕೆಟ್ಸಗಳನ್ನು ರಸಾಯನ ಪರೀಕ್ಷೆಗೆ ಕಳಿಸಲು ಪ್ರತ್ಯೇಕವಾಗಿ ಬಿಳಿ ಚೀಲದಲ್ಲಿ ಹಾಕಿ ಸೀಲ್ ಮಾಡಿದ್ದಾರೆ ಎಂದರೆ ಸರಿಯಲ್ಲ, ಈ ವಿಚಾರವಾಗಿ ನಾನು ಪೊಲೀಸರಿಗೆ ದಿನಾಂಕ **17.11.2022** ರಂದು ಹೇಳಿಕೆಯನ್ನು ಕೊಟ್ಟಿದಿನಿ ಅಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಹೇಳಿಕೆಯನ್ನು ನಿಪಿ- **6** ಎಂದು ಗುರುತಿಸಲಾಯಿತು. ನನ್ನ ಜೊತೆ ಚಾಸಾ **2** ರವರು ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತಾರೆ. ನಿಪಿ **1** ರಿಂದ **4** ರಲ್ಲಿ ನಮ್ಮ

ಮುಂದೆ ಮದ್ಯದ ಟೆಟ್ರಾ ಪ್ಯಾಕೆಟ್ಟಗಳನ್ನು ಆರೋಪಿಯ ಮನೆಯಿಂದ ಬೆಳಗ್ಗೆ **11.30** ರಿಂದ **12** ಗಂಟೆಯವರೆಗೆ ದಿಃ **10.11.2022** ರಂದು ಅಮಾನತ್ತು ಪಡಿಸಿಕೊಂಡು ಅದರಲ್ಲಿರುವ ಅಂಶಗಳನ್ನು ತಿಳಿದುಕೊಂಡು ಸಹಿ ಮಾಡಿ ಈಗ ಆರೋಪಿಗೆ ಸಹಾಯ ಮಾಡಲು ಬಸ್ ನಿಲ್ದಾಣದಲ್ಲಿ ಸಹಿ ಮಾಡಿದೀನಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ತಿಪಟೂರು.